# ಹೂಗಳಾ ಲೋಕವೇ..!

## ಟುಲಿಪ್ ತೋಟದಲ್ಲೊಂದು ಸುತ್ತು



**ವರ್ಷಕ್ಕೊಮ್ಮೆ ಶ್ರೀನಗರದಲ್ಲಿ ತಿಂಗಳ ಕಾಲ ತೆರೆದುಕೊಳ್ಳುವ 'ಟುಲಿಪ್ ಫೆಸ್ಟಿವಲ್' ಹೂಪ್ರಿಯರ ಪಾಲಿಗೆ ಸಂಭ್ರಮದ ಹಬ್ಬ. ಕೊರೊನಾ ಕಾರಣದಿಂದ ಎರಡು ವರ್ಷಗಳ ಬಿಡುವಿನ ಬಳಿಕ ಈ ವರ್ಷ ತೆರೆದುಕೊಂಡ ಟುಲಿಪ್ ಫೆಸ್ಟಿವಲ್ ನೋಡಿಬಂದ ಚಂದದ ಅನುಭವಕಥನ ಇಲ್ಲಿದೆ.**

**■ ಸೀಮಾ ಹೆಗಡೆ**

ಬಿರುಸಾದ ಚಳಿಗಾಲ ಮುಗಿದು ವಸಂತ ಕಾಲ ಶುರುವಾಗುವ ಹೊತ್ತಿನಲ್ಲಿ ಕಾಶ್ಮೀರ ಹೂವುಗಳಿಂದ ನಗುತ್ತಿರುತ್ತದೆ ಎಂದು ನಾವು ಕೇಳಿದ್ದೆವು. ತೋಟಗಾರಿಕಾ ಪದವೀಧರ ದಂಪತಿಯಾದ ನಮಗೆ ಹಿಮಾಚ್ಛಾದಿತ ಕಾಶ್ಮೀರಕ್ಕಿಂತ ಹೂಗಳಿಂದ ಅಲಂಕೃತವಾದ ಕಾಶ್ಮೀರವನ್ನು, ಅದಕ್ಕಿಂತ ಹೆಚ್ಚಾಗಿ ಶ್ರೀನಗರದ 'ಟುಲಿಪ್ ಫೆಸ್ಟಿವಲ್' ನೋಡುವ ಬಯಕೆಯಿತ್ತು. ಗೂಗಲ್ ಬಾಬಾನ ಸಹಾಯದಿಂದ ಪ್ಲಾನಿಂಗ್ ಆಗಿತ್ತು. ಪ್ರತಿ ವರ್ಷದಂತೆ ಟುಲಿಪ್ ಹಬ್ಬ ಏಪ್ರಿಲ್ ತಿಂಗಳಲ್ಲಿ ಶುರುವಾಗುವ ಮಾಹಿತಿಯೊಂದಿಗೆ ನಮ್ಮ ಪ್ರವಾಸವನ್ನು ಏಪ್ರಿಲ್‌ನಲ್ಲಿ ಯೋಜಿಸಿದ್ದೆವು. ಆ ದಿನಕ್ಕಾಗಿ ಎದುರು ನೋಡುತ್ತಿದ್ದ ನಮಗೆ ಮಾರ್ಚ್ 23ರಂದು ಟುಲಿಪ್ ತೋಟ ಪ್ರವಾಸಿಗರ ಪ್ರವೇಶಕ್ಕೆ ಮುಕ್ತವಾಗಿದೆ ಎಂದು ತಿಳಿದು ಪುಳಕವಾಗಿತ್ತು.

ನಿರೀಕ್ಷೆಗಳನ್ನು ಹೊತ್ತು ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ಬಂದಿಳಿದೆವು. ಮೊಬೈಲ್ 'ನೋ ಸಿಗ್ನಲ್' ತೋರುತ್ತಿತ್ತು. ಕಾರಣ ಕಾಶ್ಮೀರದಲ್ಲಿ ಚಲಾವಣೆಯಾಗದ ನಮ್ಮ 'ಪ್ರೀ ಪೇಯ್ಡ್ ಸಿಮ್'. ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ನಿಧಾನವಾಗಿ 'ಕಾಶ್ ಮೋ(ಮೀ)ರ್'ದ ವಾಸ್ತವ ಬಯಲಾಗಿತ್ತು. ಚೌಕಾಸಿ ಮಾಡದಿದ್ದರೆ ಕಿಸೆ ಹಗುರಾಗುವುದು ಖಚಿತ ಎಂದು ತಿಳಿಯಿತು. ದುಪ್ಪಟ್ಟು ದುಡ್ಡು ಕೊಟ್ಟು ಟ್ಯಾಕ್ಸಿಯೊಂದನ್ನು ಬಾಡಿಗೆಗೆ ಪಡೆದು ಮೊದಲೇ ನಿಗದಿಪಡಿಸಿದ್ದ ಹೋಟೆಲ್‌ಗೆ ಹೊರಟೆವು.

ಮೊದಲೆರಡು ದಿನದ ಶ್ರೀನಗರದ ವಾಸ್ತವ್ಯವೇಕೋ ನಮಗೆ ಒಗ್ಗಲಿಲ್ಲ. ಮಲೆನಾಡಿನ ಪ್ರಶಾಂತ ವಾತಾವರಣದಲ್ಲಿದ್ದ ನಮಗೆ, ಪ್ರವಾಸಿಗರಿಂದ ಕಿಕ್ಕಿರಿದ ಕಲುಷಿತವಾದ ಶ್ರೀನಗರ ರುಚಿಸಲಿಲ್ಲ. ಹಿಮ ಕರಗಿ ಬೋಳು ಗುಡ್ಡವಾಗುವ ಸನಿಹದಲ್ಲಿದ್ದ ಗುಲ್ಮಾರ್ಗ್, ಸೋನ್ ಮಾರ್ಗಗಳು ನೀರಸವೆನಿಸಿದ್ದವು. ಹಸಿರು ಹುಲ್ಲುಗಾವಲಿನ ಪಹಲ್ಗಾಮ್‌ಕ್ಕಿಂತ ನಮ್ಮ ಕೊಡಗು, ಚಿಕ್ಕಮಗಳೂರೇ ಸುಂದರ ಎನಿಸಿತು. ಜೊತೆಗೆ 26–27 ಡಿಗ್ರಿ ಸೆಲ್ಸಿಯಸ್ ಇದ್ದ ದಿನದ ತಾಪಮಾನ ನಮ್ಮನ್ನು ಸುಸ್ತಾಗಿಸಿತ್ತು.

ನಾವು ಬಂದ ಬಹು ಮಹತ್ವದ ಉದ್ದೇಶವಾದ ಟುಲಿಪ್ ಗಾರ್ಡನ್‌ನ ವೀಕ್ಷಣೆ ನಮ್ಮ ಕಾಶ್ಮೀರ್ 'ಬಕೆಟ್ ಲಿಸ್ಟ್'ನ ತುದಿಯಲ್ಲಿತ್ತು. ಅಲ್ಲಿನ ಸ್ಥಳೀಯರಿಗೆ ಟುಲಿಪ್ ಗಾರ್ಡನ್ ಅಷ್ಟೇನು ಆಸಕ್ತಿದಾಯಕ ವಿಷಯವಾಗಿರಲಿಲ್ಲ. 'ವಹಾ ಕುಚ್ ಭಿ ನಹಿ, ಸಿರ್ಫ್ ಫೂಲ್ ಹೋತಾ ಹೈ'



